ನಿಮಗೆ ಬೇಡವಾದೆವು. ಕತ್ತಲಿನಲ್ಲಿ ಕಾಣೆಯಾಗಿದ್ದ ದಾರಿ ಹುಡುಕುತ್ತಾ ಯಾರ ನೆರವೂ ಇಲ್ಲದೆ ನಡೆದವು. ಕೊನೆಗೂ ನಮ್ಮನ್ನು ಬೀಳ್ಕೊಟ್ಟರಿ ಈ ಭೂಮಿಯಿಂದ. ಮಣ್ಣಿನೊಳಗಿನಿಂದ ಬೀಜಗಳು ಮೊಳಕೆಯೊಡೆಯುತ್ತಿವೆ. ನಮ್ಮ ಆಸೆಗಳು ಮತ್ತೆ ಹುಟ್ಟಿಕೊಳ್ಳುತ್ತವೆ' ಅವನ ಮಾತುಗಳು ಬಯಲ ಗಾಳಿಯನ್ನು ಸೀಳಿಕೊಂಡು ಎಲ್ಲಾ ದಿಕ್ಕಿಗೂ ಸಿಡಿಮದ್ದಿನಂತೆ ಸಿಡಿಯುತ್ತಿದ್ದವು. ಮೌನವನ್ನೇ ಆಶ್ರಯಿಸುತ್ತಿದ್ದ ಅವನ ಕಣ್ಣುಗಳು, ಇದ್ದಕ್ಕಿದ್ದಂತೆ ಕುಲುಮೆಯೊಳಗೆ ಉರಿಯುವ ಕೆಂಡದಂತೆ ನಿಗಿನಿಗಿಸುತ್ತಿದ್ದವು.

ಅವನ ಮಾತುಗಳು ಮುಂದುವರಿದವು: 'ಇನ್ನೂ ಹೇಳಬೇಕೆಂದರೆ, ನಾವು ಭೂಮಿಗೆ ಹೆಚ್ಚು ಕೃತಜ್ಞರಾಗಿದ್ದೇವೆ. ಏಕೆಂದರೆ, ರಾತ್ರಿಯಲ್ಲಿ ಆಕಾಶದ ಕೆಳಗೆ ಕಣ್ಣುತೆರೆದುಕೊಂಡು ನಕ್ಷತ್ರಗಳನ್ನು ಎಣಿಸುತ್ತಾ, ನಿದ್ರೆ ಮಾಡಲು ಅವಕಾಶ ನೀಡಿದ್ದಕ್ಕೆ, ನಾವು ಕಟ್ಟಿದ ರಸ್ತೆಗಳಲ್ಲಿ ನಮ್ಮ ಕಾಲುಗಳ ಮೇಲೆ ದಣಿವಾಗುವವರೆಗೂ ನಡೆಯುವುದಕ್ಕೆ, ಅಸುನೀಗಿದ ಮಕ್ಕಳನ್ನು ಹೆಗಲ ಮೇಲೆ ಹೊತ್ತು ನಡೆಯಲು ಶಕ್ತಿ ನೀಡಿದ್ದಕ್ಕೆ, ರೈಲು ಹಳಿಗಳ ಮೇಲೆ ನಿಶ್ಚಿಂತೆಯಿಂದ ಸಾಯಲು ಅವಕಾಶ ಕಲ್ಪಿಸಿದ್ದಕ್ಕೆ ಭೂಮಿಗೆ ನಾವು ಕೃತಜ್ಞರಾಗಿದ್ದೇವೆ' ಎಂದು ಹೇಳಿದ. ಅವನ ಮಾತುಗಳೆಲ್ಲ ಕೃತಜ್ಞತೆಯ ಕೊಳದಿಂದ ಎದ್ದು ಬಂದಂತಿದ್ದವು. ಇಷ್ಟು ಹೇಳಿದ ಅವನ ದೇಹ ಮಣ್ಣುರೂಪ ತಳೆದು ಹುಡಿ ಹುಡಿಯಾಗಿ ಭೂಮಿಯೊಳಗೆ ಇಳಿಯಿತು. ಸುತ್ತಲಿದ್ದ ಮರಗಳೆಲ್ಲಾ ಹಳದಿ ಎಲೆಗಳನ್ನು ಉದುರಿಸಿ ಮೌನವಾದವು.

ಅಲ್ಲಿನ ಎಲ್ಲ ದೃಶ್ಯಗಳನ್ನೂ ತಮ್ಮೊಳಗೆ ತುಂಬಿಕೊಳ್ಳುವಲ್ಲಿ ನನ್ನ ನಿರ್ಭಾಗ್ಯ ಕಣ್ಣುಗಳು ಸೋತುಹೋದವು. ಇದೆಲ್ಲಾ ಎಂದಿಗೆ ಕೊನೆಗಾಣುತ್ತದೋ ತಿಳಿಯದು! ಎದೆ ಭಾರದಿಂದ ಅಲ್ಲಿಂದ ಹೆಜ್ಜೆ ಕಿತ್ತಿಟ್ಟೆ. ನನ್ನ ನೆರಳು ಮಾತ್ರ ನನ್ನೊಂದಿಗೆ ತೆವಳುತ್ತಾ ಬರುತ್ತಿತ್ತು. ರೇವತಿಗಾಗಿ ನನ್ನ ಕಣ್ಣುಗಳು ಹುಡುಕಾಡಿದವು. ರೇವತಿ ಕಾಣಿಸಲಿಲ್ಲ! 'ಎಲ್ಲಿ ಹೋದಳು ಇವಳು...' ಕಳವಳದಿಂದ ಅತ್ತಿತ್ತ ನೋಡಿದೆ. ಅವಳು ಕಾಣಿಸಲಿಲ್ಲ! ಹಿಂದಿರುಗಿ ನೋಡಿದೆ. ರೈಲು ಹಳಿಯ ಪಕ್ಕದಲ್ಲಿ ತಾಯಿಯನ್ನು ಕಳೆದುಕೊಂಡು ಅನಾಥವಾಗಿದ್ದ ಕೂಸನ್ನು ಕಂಕುಳಲ್ಲಿ ಎತ್ತಿಕೊಂಡು, ಮಳೆ ಹೆಸರಿನ ಹುಡುಗಿ ರೇವತಿ ನನ್ನೆಡೆಗೆ ಬರುತ್ತಿದ್ದಳು.

ಎಷ್ಟೊಂದು ಸಂತಸವಿತ್ತು ಅವಳ ಕಣ್ಣುಗಳಲ್ಲಿ!


### ಜಿ.ವಿ. ಆನಂದಮೂರ್ತಿ

ಲೇಖಕರು ತುಮಕೂರಿನ ತಿಗಳರ ಗೊಲ್ಲಹಳ್ಳಿ, ಬೆಳ್ಳಾವಿ ಮಜರೆ ಗ್ರಾಮದವರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪದವಿ, ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. 'ಪ್ರಜಾವಾಣಿ' ಕಥಾಸ್ಪರ್ಧೆಯಲ್ಲಿ ಬಹುಮಾನ ಬಂದಿದೆ. 'ಪ್ರಜಾವಾಣಿ' ಮತ್ತು 'ಮಯೂರ' ಪತ್ರಿಕೆಗಳಲ್ಲಿ ಕತೆ ಮತ್ತು ಪ್ರಬಂಧಗಳು ಪ್ರಕಟಗೊಂಡಿವೆ. ಹವ್ಯಾಸಿ ವನ್ಯಜೀವಿ ಛಾಯಾಗ್ರಾಹಕ. 'ನೀರಗಂಧ', 'ಜಾಲಾರ ಹೂವು ಮತ್ತು ಇತರ ಪ್ರಬಂಧಗಳು', 'ಹೊಳೆ ಸಾಲು', 'ಹರಿವ ಹೊಳೆ' ಅವರ ಕೆಲವು ಪುಸ್ತಕಗಳು.